ಸೃಜನಿ

I S S N: 2583-3510

SIRDF JOURNALS

editor@srujani.in
www.srujani.in

SRUJANI: Indian Journal of Innovative Research and Development (SIJIRD)
Volume-4 Special Issue 1, March-April 2025, Pp. 21-26
Bi-Monthly, Peer-Reviewed, Open Access, Indexed Journal

# ಬೆಳಗಾವಿ ಜಿಲ್ಲೆಯಲ್ಲಿ ಗಾಂಧೀಜಿ

**ಡಾ.ಲೋಕೇಶ್[1] ಮತ್ತು ನಾರಾಯಣಗೌಡ[2]**

[1]ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಮಕೂರು
[2]ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಿದ್ದಾಪುರ

**Abstract:**

*ಭಾರತದ ಚರಿತ್ರೆಯಲ್ಲಿ ಗಾಂಧೀಜಿಯವರು ಭಾರತದ ಸ್ವತಂತ್ರ್ಯ ಸಾಧನೆಗಾಗಿ ದೇಶದ ಉದ್ದಗಲಕ್ಕೂ ಸಂಚಾರಿಸಿದ್ದಾರೆ. ಇವರು ಖಾದಿ ಪ್ರಚಾರ, ಹರಿಜನೋದ್ದಾರಗಳಿಗಾಗಿ ಕರ್ನಾಟಕಕ್ಕೆ ಭೇಟಿ ನೀಡಿದ್ದರು. ಈ ಸಂದರ್ಭದಲ್ಲಿ ಕರ್ನಾಟಕದ ಧಾರವಾಡ, ಬಿಜಾಪುರ, ಹುಬ್ಬಳ್ಳಿ, ಬೆಂಗಳೂರು, ಮೈಸೂರು, ಕೋಲಾರ, ಬಳ್ಳಾರಿ ಹಾಗೂ ಬೆಳಗಾವಿಗೂ ಭೇಟಿ ನೀಡಿದ್ದರು. ಈ ಭೇಟಿಯಲ್ಲಿ ಬೆಂಗಳೂರು ಮತ್ತು ಬೆಳಗಾಂ ಜಿಲ್ಲೆಗಳ ಭೇಟಿ ಬಹು ಅರ್ಥಪೂರ್ಣ ಹಾಗೂ ವಿಶೇಷವಾದವು. ತಮ್ಮ ರಾಜಕೀಯ ಗುರುಗಳಾದ ಗೋಪಾಲಕೃಷ್ಣ ಗೋಖಲೆಯವರ ಭಾವಚಿತ್ರದ ಅನಾವರಣಕ್ಕಾಗಿ ಬೆಂಗಳೂರಿಗೆ ಭೇಟಿ ನೀಡಿದ್ದು, ಮತ್ತೊಂದು ತಮ್ಮ ಜೀವಿತಾವಧಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆಯನ್ನು ವಹಿಸಿದ್ದು, ಕರ್ನಾಟಕ ಜನತೆಗೆ ಹೆಮ್ಮೆಯ ಸಂಗತಿ. ಗಾಂಧೀಜಿಯವರು ಕರ್ನಾಟಕಕ್ಕೆ ಅನೇಕ ಭಾರಿ ಭೇಟಿ ನೀಡಿದ್ದಾರೆ. ಗಾಂಧೀಜಿಯವರು ಬೆಳಗಾವಿ ಜಿಲ್ಲೆಗೆ ಭೇಟಿ ನೀಡಿದ ಸಂದರ್ಭಗಳನ್ನು ಈ ಲೇಖನಗಳಲ್ಲಿ ವಿವರಿಸಲಾಗಿದೆ.*

**Keywords:** *ಕರ್ನಾಟಕ ಇತಿಹಾಸ, ಕರ್ನಾಟಕ ಕಾಂಗ್ರೆಸ್, ಬೆಳಗಾವಿ, ಕಾಂಗ್ರೆಸ್ ಅಧಿವೇಶನ.*

## ಪೀಠಿಕೆ

ಗಾಂಧೀಜಿಯವರು ಪ್ರಥಮ ಬಾರಿಗೆ 1916ರಲ್ಲಿ ಬೆಳಗಾವಿಗೆ ಭೇಟಿ ನೀಡಿದರು. ಬಾಂಬೆ ಪ್ರೆಸಿಡೆನ್ಸಿಯ ಮುಂಬೈ ಪರಿಷತ್‌ನ್ನು ನಡೆಸಲು ಬೆಳಗಾವಿ ನಾಯಕರಾದ ಗಂಗಾಧರ ದೇಶಪಾಂಡೆ, ಮಹಾದೇವ ಶಾಸ್ತ್ರಿ ದೀವೆಕರ್ ಮತ್ತು ಶ್ರೀ ದತ್ತೋಪಂಥ ಬೆಳವಿಯವರು ಸಾಕಷ್ಟು ಸಿದ್ಧತೆಗಳನ್ನು ನಡೆಸಿದರು. ಈ ಪರಿಷತ್ತಿಗೆ ತಿಲಕರ ಆಗಮನವಾಗಬೇಕಾಗಿತ್ತು. ಆದರೆ ಗಾಂಧೀಜಿ ಈ ಪರಿಷತ್ತಿಗೆ ಆಗಮಿಸಿದ್ದು, ಒಂದು ವಿಶೇಷ ಈ ಪರಿಷತ್ತಿಗೆ ತಿಲಕರನ್ನು ಮತ್ತು ಗಾಂಧೀಜಿ ಇಬ್ಬರನ್ನು ಆಹ್ವಾನಿಸಬೇಕೆಂದು ಪರಿಷತ್ತಿನ ಎಲ್ಲಾ ಅಧಿನಾಯಕರು ತೀರ್ಮಾನಿಸಿದರು. ತಿಲಕರು ತೀವ್ರಗಾಮಿ ನಾಯಕರ ಮಂದಗಾಮಿ ನಾಯಕರದ ಗೋಖಲೆಯವರ ಆಪ್ತ ಶಿಷ್ಯರು ಗಾಂಧೀಜಿಯವರು. ಗಾಂಧೀಜಿಯವರು ಪರಿಷತ್ತಿನ ಕಾರ್ಯಕ್ರಮಕ್ಕೆ ಬರುತ್ತಾರೋ ಇಲ್ಲವೆಂಬ ಸಂಶಯವು ಇತ್ತು. ಕೊನೆಗೆ ಗಂಗಾಧರ ದೇಶಪಾಂಡೆ ಅವರು ಗಾಂಧೀಜಿಯವರಿಗೆ ಪತ್ರಬರೆದರು. ಅದಕ್ಕೆ ಪ್ರತ್ಯುತ್ತರವಾಗಿ ಗಾಂಧೀಜಿಯವರು ದಿನಾಂಕ 29 ಏಪ್ರಿಲ್ 1916 ರಂದು "ನಾನು ಸತ್ತರೆ ಒಂದು ಹೋಯಿತು ವಿನಹ, ಇಲ್ಲದೆ ಇದ್ದರೆ ನಾನು ಪರಿಷತ್ತಿಗೆ ಬಾರದಂತೆ ಯಾರು ನನ್ನನ್ನು

***Please cite this article as:*** ಲೋಕೇಶ್ ಮತ್ತು ನಾರಾಯಣಗೌಡ. (2025). ಬೆಳಗಾವಿ ಜಿಲ್ಲೆಯಲ್ಲಿ ಗಾಂಧೀಜಿ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(1), 21–26

ತಡಯಲಾರದೆಂದು ಪತ್ರ ಬರೆದರು"[1]. ಈ ವಿಷಯದಿಂದ ದೇಶಪಾಂಡೆ ಅವರಿಗೆ ಸಮಾಧಾನವಾಯಿತು. ದಿನಾಂಕ 29/06/1916 ರಂದು ಗಾಂಧೀಜಿಯವರು ತಮ್ಮ ಪುತ್ರರಾದ ರಾಮದಾಸ್ ಗಾಂಧಿ ಮತ್ತು ಕಾಕಾ ಕಾಳೇಕರೊಂದಿಗೆ ಬೆಳಗಾವಿಗೆ ಆಮಿಸಿದರು. ಅಂದಿನ ಪರಿಷತ್ತಿನ ಭಾಷಣದಲ್ಲಿ ಗಾಂಧೀಜಿಯವರು "ತಾವು ಯಾವ ಪಕ್ಷಕ್ಕೂ ಸೇರಿಲ್ಲ ರಾಷ್ಟ್ರೀಯ ಎರಡು ಮಹಾ ಶಕ್ತಿಗಳು ಬೆಳಗಾವಿಯಲ್ಲಿ ಸಮಾಗಮ ಆಗುತ್ತಿವೆ. ಇಂತಹದೊಂದು ಶಾಂತಿ ಸಮಾಧಾನಗಳ ಕಾಲ ಇಲ್ಲಿ ಪ್ರಾರಂಭವಾಗುತ್ತದೆ ಎಂದು ನಾನು ಇಲ್ಲಿಗೆ ಬಂದಿದ್ದೇನೆ ಇದು ಒಂದು ಸಂತೋಷದ ಗಳಿಗೆ ಎಂದು ಹೇಳುತ್ತಾ ತಿಲಕರು ಕಳಿಸಿದ ಗೊತ್ತುವಳಿಯನ್ನು ನೋಡಿ ಇದರಲ್ಲಿ ಪ್ರತಿಯೊಂದು ಅಕ್ಷರ ಒಪ್ಪುವಂತದ್ದು ವಕೀಲರ ದೃಷ್ಟಿಯಿಂದ ನೋಡಿದರೆ ಸಾಕಷ್ಟು ದೋಷಗಳಿವೆ, ಆದರೆ ಇದು ರಾಷ್ಟ್ರೀಯ ಸಮಸ್ಯೆ ಹಾಗೂ ಸಾಮಾನ್ಯ ಜನರ ದೃಷ್ಟಿಯಿಂದ ನೋಡಬೇಕು ಆಗ ವಿರೋಧಿ ಪಕ್ಷದ ಲೋಪದೋಷಗಳು ಕಾಣುವುದಿಲ್ಲ. ಮುಂದುವರೆದು ಐಕ್ಯತೆ ಇಲ್ಲದ್ದರೆ ಸ್ವರಾಜ್ ಸಿಗುವುದಿಲ್ಲ, ಭಾರತಕ್ಕೆ ಸ್ವರಾಜ್ಯ ಸಿಗಬೇಕು ಸಮಾಜದಲ್ಲಿ ಕೀಳು–ಮೇಲು ಮನೋಭಾವನೆಗಳಿದ್ದರೂ ಸ್ವರಾಜ್ಯ ಬಂದು ಏನು ಪ್ರಯೋಜನ ನಮ್ಮಲ್ಲಿ ಈ ಭಾವನೆಗಳು ಇರುವವರೆಗೂ ಸ್ವರಾಜ್ಯ ಪ್ರಾಪ್ತಿ ಆಗುವುದಿಲ್ಲ ಆದ್ದರಿಂದ ಈ ಭೇದ ಭಾವಗಳನ್ನು ಬಿಟ್ಟು ಬಿಡಬೇಕು" ಎಂದು ಜನತೆಗೆ ಕರೆ ನೀಡಿದರು.

ಗಾಂಧೀಜಿಯವರು ಪ್ರಥಮ ಬಾರಿಗೆ ದಿನಾಂಕ:08–11–1920 ರಂದು ಬೆಳಗಾವಿಗೆ ಭೇಟಿ ನೀಡಿದ್ದರು. ಅಸಹಕಾರ ಚಳವಳಿಯನ್ನು ಸಂಘಟಿಸಿ, ತಿಲಕ್ ರಾಷ್ಟ್ರೀಯ ನಿಧಿಗೆ ಹಣವನ್ನು ಸಂಗ್ರಹಿಸಲು ಬಂದಿದ್ದರು. ಇಲ್ಲಿನ ಕಾಂಗ್ರೆಸ್ ನಾಯಕರಾದ ಗಂಗಾಧರರಾವ್ ದೇಶಪಾಂಡೆ ಮತ್ತು ಗೋವಿಂದರಾಯ ಯಾಳಗಿಯವರು ಎಲ್ಲಾ ಸಿದ್ದತೆಗಳನ್ನು ಮಾಡಿದ್ದರು. ಬೆಳಗಾವಿಯ ಕೋಟೆಯ ಬಯಲಲ್ಲಿ ಸಭೆಯನ್ನು ಸಂಘಟಿಸಲಾಗಿತ್ತು. ಗಾಂಧೀಜಿಯವರನ್ನು ಸಭೆಗೆ ಕರೆತರಲಾಯಿತು. ಈ ಸಭೆಯಲ್ಲಿ ಗಾಂಧಿ ಟೋಪಿಗಳನ್ನು ಹಂಚಿ ಒಂದು ಸಾವಿರ ರೂಪಾಯಿಗಳನ್ನು ಸಂಗ್ರಹಿಸಲಾಯಿತು[2].

ತದನಂತರ ಮಾರುತಿ ದೇವಾಲಯದಲ್ಲಿ ಮಹಿಳೆಯರದೇ ಆದ ಸಭೆಯನು ಆಯೋಜಿಸಲಾಗಿತ್ತು. ಈ ಸಭೆಗೆ ಗಾಂಧೀಜಿಯವರ ಜೊತೆಯಲ್ಲಿ ಬಂದಿದ್ದ ಶೌಕತ್‌ಅಲಿಯವರು ಆಕಸ್ಮಿಕವಾಗಿ ಈ ಸಭೆಗೆ ಹಾಜರಾಗಲಿಲ್ಲ. ಆದ್ದರಿಂದ ಮಹಿಳೆಯರು ಶೌಕತ್‌ಆಲಿಯವರನ್ನು ಕರೆಸಬೇಕೆಂದು ಅಭಿಪ್ರಾಯವನ್ನು ತಿಳಿಸಿದಾಗ, ಡಾ.ಶೌಕತ್‌ಆಲಿಯನ್ನು ಈ ಸಭೆಗೆ ಕರೆಯಿಸಿದರು. 'ಈ ನಿಮ್ಮ ಸಾಧನೆಯಲ್ಲಿ ಭಾರತದ ಗೆಲುವು ಅಡಗಿದೆ ಎಂದು ಸಂತೋಷವನ್ನು ವ್ಯಕ್ತಪಡಿಸಿದರು'. ಮುಂದುವರಿದು ನಮ್ಮ ಮಹಿಳೆಯರು ಮುಸ್ಲಿಂರನ್ನು ಎಲ್ಲಿಯವರೆಗೂ ಅಣ್ಣ–ತಮ್ಮಂದಿರೆಂದು ತಿಳಿಯುವುದಿಲ್ಲವೋ ಅಲ್ಲಿಯವರೆಗೆ ನಮ್ಮ ದೇಶದ ದುರದುಷ್ಟೆ. ಈ ದೇವಸ್ಥಾನದಲ್ಲಿ ಕುಳಿತು ನಿಮ್ಮ ಮನಸ್ಸು ನೋಯಿಸಲು ನನಗೆ ಇಷ್ಟವಿಲ್ಲ. ನಾನು ಒಬ್ಬ ಸನಾತನ ಹಿಂದೂ ಬೇರೆ ಯಾವ ಧರ್ಮದವರನ್ನು ತಿರಸ್ಕರಿಸಬಾರದು, ಅಗೌರವ ತೋರಿಸಬಾರದೆಂದು ನನಗೆ ಈ ಧರ್ಮ ಹೇಳಿಕೊಟ್ಟಿದೆ. ನಾವು ಅವರನ್ನು ಪ್ರೀತಿಸಬೇಕು. ಅವರ ಜೊತೆಯಲ್ಲಿ ಊಟ ಮಾಡಬೇಕು, ಇತರೆ ಮತದವರನ್ನು ಸಹ ಪ್ರೀತಿಸಬೇಕು, ಗೌರವಿಸಬೇಕೆಂದು ನಮ್ಮ ಮಕ್ಕಳಿಗೆ ನಾವು ಹೇಳಿಕೊಡಬೇಕೆಂದು ಬೇಡುತ್ತೇನೆ ಎಂದು ವಿನಂತಿಸಿದರು.

---

[1] ನಾರಾಯಣ ಕೆ.ಎಸ್. (1988). *ಗಂಗಾಧರರಾವ್ ದೇಶಪಾಂಡೆ, ಬಿಲ್ಡರ್ಸ್ ಆಫ್ ಮಾರ್ಡನ್ ಇಂಡಿಯಾ ಸಿರೀಸ್,* ಮಿನಿಸ್ಟರ್ ಆಫ್ ಇನ್ಫಾರಮೇಸನ್,

[2] ಸೂರ್ಯನಾಥ್ ಕಾಮತ್. (1974). *ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂಪುಟ–1.*

ನಂತರ ದೇಶವಿದ್ಯಾಮಾನಗಳನ್ನು ತಿಳಿಯಬೇಕು. ಇದಕ್ಕಾಗಿ ಉನ್ನತ ವ್ಯಾಸಂಗ ಮಾಡಬೇಕಾಗಿಲ್ಲ. ದೊಡ್ಡದೊಡ್ಡ ಗ್ರಂಥಗಳನ್ನು ಓದಬೇಕಾಗಿಲ್ಲ. ಪಂಜಾಬಿನಲ್ಲಿ ನಡೆದ ಘೋರ–ಕೃತ್ಯವು ಸರ್ಕಾರದ ದಬ್ಬಾಳಿಕೆಗೆ ನಮ್ಮ ಸಾಕ್ಷಿಯಾಗಿದೆ. ಇಂತಹ ಸರ್ಕಾರದೊಂದಿಗೆ ನಾವು ಅಸಹಕಾರವನ್ನು ತೋರಬೇಕು. ಜೊತೆಗೆ ಭಾರತಕ್ಕೆ ಸ್ವಾತಂತ್ರ್ಯ ಪ್ರಾಪ್ತವಾಗುವವರೆಗೆ, ಹೆಂಗಸರಾಗಲಿ, ಗಂಡಸರಾಗಲಿ ಒಳ್ಳೆಯ ಬಟ್ಟೆ ಮತ್ತು ಒಡವೆಯನ್ನು ತೊಡುವಹಾಗಿಲ್ಲ. ನಮ್ಮ ಸುಖ–ಭೋಗಗಳನ್ನು ತ್ಯಜಿಸಬೇಕೆಂದು ತಮ್ಮಲ್ಲಿ ವಿನಯದಿಂದ ಪ್ರಾರ್ಥಿಸುತ್ತೇನೆ.

ಐವತ್ತು ವರ್ಷಗಳ ಹಿಂದೆ ನಮ್ಮ ದೇಶದಲ್ಲಿ ಮಹಿಳೆಯರು ರಾಟಿಯನ್ನು ತಿರುಗಿಸುತ್ತಿದ್ದರು. ಕೈನೂಲಿನ ಬಟ್ಟೆಯನ್ನು ಉಡುತ್ತಿದ್ದರು. ನಾವು ಸ್ವದೇಶಿ ಧರ್ಮವನ್ನು ಕೈಬಿಟ್ಟೆವೋ, ಅಂದೇ ನಮ್ಮ ಪತನ ಪ್ರಾರಂಭವಾಯಿತು. ನಾವು ಗುಲಾಮರಾದೇವೋ, ದೇಶದಜನರು ಹಸಿವಿನಿಂದ ಸಾಯುತ್ತಿದ್ದಾರೆ. ಪ್ರತಿಯೊಬ್ಬರೂ ರಾಟೆಯಿಂದ ನೂತನೂಲನ್ನು ದಾನ ಮಾಡಬೇಕು ಎಂದು ಸಭೆಯಲ್ಲಿ ಮಾತನಾಡಿದರು. ಇಂದು ನೀವು ನೀಡಿರುವ ಒಡವೆ, ಹಣ ಕೋಟಿ ರೂಪಾಯಿಗಳಿಗೆ ಸಮ ಎಂದು ಹರ್ಷವನ್ನು ವ್ಯಕ್ತಪಡಿಸಿದರು. ಅಂದು ಆ ಸಭೆಯಿಂದ ಸಾರ್ವಜನಿಕರು ಆಭರಣಗಳು ಮತ್ತು ನಗದು ಹಣವನ್ನು ತಿಲಕ ರಾಷ್ಟ್ರೀಯ ನಿಧಿಗೆ ನೀಡಿದರು.

**ಅಖಿಲ್ ಭಾರತ ಕಾಂಗ್ರೆಸ್‌ನ 39ನೇ ವಾರ್ಷಿಕ ಅಧಿವೇಶನ –1924**

ಅಖಿಲ ಭಾರತ ಕಾಂಗ್ರೆಸ್‌ನ 39ನೇ ಅಧಿವೇಶನವ ಆಂಧ್ರಪ್ರದೇಶದ ಕಾಕಿನಾಡಿನಲ್ಲಿ ನಡೆಯಿತು. ಇಲ್ಲಿ 39ನೇ ಕಾಂಗ್ರೆಸ್ ಅಧಿವೇಶನವನ್ನು ಕರ್ನಾಟಕದಲ್ಲಿ ನಡೆಯುವುದರ ಬಗ್ಗೆ ಚರ್ಚಿಸಿ ಅಂತಿಮ ತೀರ್ಮಾನಕ್ಕೂ ಸಹ ಬಂದರು. ಈ ಜವಬ್ದಾರಿಯನ್ನು ಬೆಳಗಾವಿಯ ಗಂಗಾಧರ್‌ರಾವ್ ದೇಶಪಾಂಡೆಯವರು ವಹಿಸಿಕೊಂಡಿದ್ದರು. ಈ ಅಧಿವೇಶನದಿಂದ ಬೆಳಗಾವಿಗೆ ಹಿಂತಿರುಗಿದ ಮೇಲೆ ಕರ್ನಾಟಕ ಪ್ರದೇಶಕಾಂಗ್ರೆಸ್‌ನ ನಾಯಕರು ಹುಬ್ಬಳ್ಳಿಯಲ್ಲಿ ಒಂದು ಸಭೆಯನ್ನ, ಎರಡನೇ ಸಭೆಯನ್ನು ಬಿಜಾಪುರದಲ್ಲಿ ನಡೆಸಲಾಯಿತು. ಶ್ರೀನಿವಾಸ ಕೌಜಲಗಿ ಮತ್ತು ಕಾರ್ನಾಡು ಸದಾಶಿವರಾಯರು ಮಂಗಳೂರಿನಲ್ಲಿ ಅಧಿವೇಶನವನ್ನು ಬಿಜಾಪುರದಲ್ಲಿ ನಡೆಸಲು ಇಚ್ಚಿಸಿದರು. ಆದರೆ ಅಂತಿಮವಾಗಿ ಗಂಗಾಧರ್‌ರಾವ್ ದೇಶಪಾಂಡೆ ಅವರ ಇಚ್ಚೆಯಂತೆ ಅಧಿವೇಶನವನ್ನು ಬೆಳಗಾವಿಯಲ್ಲಿ ನಡೆಸಲು ತೀರ್ಮಾನಿಸಲಾಯಿತು.

ಗಂಗಾಧರರಾವ್ ದೇಶಪಾಂಡೆಯವರು ಗಾಂಧೀಜಿಯವರಿಗೆ ಪತ್ರದ ಮೂಲಕ ಅಂತಿಮ ಒಪ್ಪಿಗೆ ಪಡೆದು ಬೆಳಗಾವಿಯಲ್ಲಿ ಅಖಿಲ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ 39ನೇ ಅಧಿವೇಶನವನ್ನು ನಡೆಸಲು ಎಲ್ಲಾ ಸಿದ್ದತೆಗಳನ್ನು ಮಾಡಿದರು. ಅದರಂತೆ ಗಾಂಧೀಜಿಯವರು ಈ ಅಧಿವೇಶನದ ಅಧ್ಯಕ್ಷತೆಯನ್ನು ವಹಿಸಲು ಬೆಳಗಾವಿಗೆ ಆಗಮಿಸಿದರು.

ದಿನಾಂಕ 26/12/1924 ರಂದು ಬೆಳಗಾವಿ ಅಧಿವೇಶನದ ಅಧ್ಯಕ್ಷೀಯ ಭಾಷೆಯಲ್ಲಿ ಗಾಂಧೀಜಿಯವರು ಖಾದಿಯನ್ನು ಕುರಿತು "ನಾವು ಈಗಾಗಲೇ ಸುಮಾರು ವರ್ಷಗಳಿಂದ ದೇಶದಲ್ಲಿನ ಪ್ರತಿಯೊಬ್ಬರೂ ಖಾದಿಯನ್ನು ನೂಲಬೇಕೆಂದು ಪ್ರಚಾರ ಮಾಡುತ್ತಿದ್ದರು ಸಹ ಖಾದಿ ಪ್ರಚಾರವನ್ನು ಯಾರು ಸಹ ಅಷ್ಟಾಗಿ ಪ್ರಚಾರ ಮಾಡುತ್ತಿಲ್ಲ ಆದ್ದರಿಂದ ಕಾಂಗ್ರೆಸ್‌ನ ಕಾರ್ಯಕರ್ತರು ಮತ್ತು ಅಖಿಲ ಭಾರತ ಕಾಂಗ್ರೆಸ್ ಮಹಾ ಅಧಿವೇಶನಗಳಲ್ಲಿ ರಾಟೆಯ ಮೂಲಕ ನಮ್ಮ ಸ್ವರಾಜ್ಯ ಸಂಪಾದನೆಯಾಗಬೇಕೆಂದು ಹೇಳುತ್ತಿರುವುದು ಕೇವಲ ಮಾತಿನ ಪ್ರಚಾರವಾಗಿದೆ. ಖಾದಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸಬೇಕೆಂದು ಕರೆ ನೀಡಿದರು. ಕಾಂಗ್ರೆಸ್ ಸದಸ್ಯರಾಗ ಬಯಸುವವರು ನಾಲ್ಕಾಣೆ ಖಾದಿಯನ್ನು ಕೊಂಡುಕೊಳ್ಳುವುದರ ಮೂಲಕ

ದೇಶದಾದ್ಯಂತ ಖಾದಿಯನ್ನು ಪ್ರಚಾರಗೊಳಿಸಬೇಕು, ಮುಂದುವರೆದು, ಕಾಂಗ್ರೆಸ್ ಅಧ್ಯಕ್ಷರಾಗುವವರು ಪ್ರತಿದಿನವೂ ಅರ್ಧ ಗಂಟೆಯ ಕಾಲ ನೂಲು ತೆಗೆದು ತಿಂಗಳಿಗೆ ಎರಡು ಸಾವಿರ ಗಜಗಳ ಉದ್ದಖಾದಿಯನ್ನು ಖಾದಿಬೋರ್ಡ್‌ಗೆ ಕಳುಹಿಸಿಕೊಡಬೇಕು ಎಂದು ಸೂಚಿಸಿದರು. ಜೊತೆಗೆ ಚರಕ ಕಾರ್ಯಕ್ರಮದ ಬಗ್ಗೆ ವಿವರಣೆ ನೀಡುತ್ತಾ ಚರಕಕ್ಕೆ ಯಾವುದೇ ಭೇದಭಾವವಿಲ್ಲ ಒಂಟಿಯಾಗಿಯೂ ಸಹ ಅದನ್ನು ಮಾಡಬಹುದು ಆದರೆ ಚರಕ ಕಾರ್ಯಕ್ರಮವು ಅಪಾರವಾಗಿ ನಡೆಯದೇ ಇದ್ದರೆ ವಿದೇಶಿ ವಸ್ತ್ರ ಬಹಿಷ್ಕಾರ ಸಂಪೂರ್ಣವಾಗಿ ನಡೆಯುವುದಿಲ್ಲ. ಆದ್ದರಿಂದ ಚರಕ ಕಾರ್ಯಕ್ರಮ ಪೂರ್ಣ ಪ್ರಮಾಣದಲ್ಲಿ ನಡೆಯಬೇಕು ಎಂದು ನನಗೆ ಅನಿಸುತ್ತದೆ. ಈ ಸುತ್ತುಗಳನ್ನು 30 ಕೋಟಿ ಜನಸಂಖ್ಯೆಯಿಂದ ಗುಣಿಸಿ ಅದರಿಂದ ಸ್ವರಾಜ್ ಪ್ರಾಪ್ತಿಗೆ ಎಷ್ಟು ವೇಗ ಬರುತ್ತದೆ ನೋಡಿ ಆ ಪ್ರಗತಿ ವೇಗ ಬರಬೇಕಾದರೆ ನೂಲುವ ಕ್ರಿಯೆಯಲ್ಲಿ ಸ್ವರಾಜ್ಯ ಸಂಪಾದನೆಯ ಶಕ್ತಿ ಅಡಗಿದೆ ಎಂಬ ನನ್ನಲ್ಲಿರುವ ದೃಢ ವಿಶ್ವಾಸದ ಕಾವು ನಿಮ್ಮಲ್ಲೂ ಉಂಟಾಗಬೇಕು" ಎಂದು ಮಾತನಾಡಿ ಜನತೆಯನ್ನು ಖಾದಿಯತ್ತ ನಡೆಯಲು ಪ್ರಚೋದಿಸಿದರು[3]. ಈ ಅಧಿವೇಶನದ ನಂತರ ಕರ್ನಾಟಕದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಮತ್ತಷ್ಟು ಉರುಫಿನಿಂದ ಕಾಂಗ್ರೆಸ್ ಚಟುವಟಿಯಲ್ಲಿ ತೊಡಗಿಸಿಕೊಂಡರು.

ಈ ಅಧಿವೇಶನ ಕರ್ನಾಟಕದ ಸ್ವಾತಂತ್ರ್ಯ ಚಳವಳಿಯ ಅಧ್ಯಾಯದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವ ಅಧ್ಯಾಯವಾಯಿತು. ಈ ಅಧಿವೇಶನದ ಬಗ್ಗೆ ಇತಿಹಾಸ ತಜ್ಞರು ಲೇಖಕರು ಸಂಶೋಧಕರಾಗಿದ್ದ ಡಾ.ಪಟ್ಟಾಭಿ ಸೀತಾರಾಮಯ್ಯನವರು ಇತಿಹಾಸ ಎಂಬ ಪುಸ್ತಕದಲ್ಲಿ ತಿಳಿಸಿದ್ದಾರೆ.

ಗಾಂಧೀಜಿಯವರು ನಾಲ್ಕನೇ ಬಾರಿ ಹರಿಜನ ಪ್ರವಾಸೋದ್ಯಮ ಪ್ರವಾಸಕ್ಕಾಗಿ ಕರ್ನಾಟಕದ ಬೆಳಗಾವಿಗೆ ಆಗಮಿಸಿದರು. ಇವರು ಬೆಳಗಾವಿ ಜಿಲ್ಲೆಯ ಹಿರೇವುಳ್ಳಗೇರಿ, ಬೈಲಹೊಂಗಲ, ಸಂಪಗಾವ ಯಮಕನ ಮರಡಿಗಳಲ್ಲಿ ಭೇಟಿ ನೀಡಿ ಅಲ್ಲಿ ದೇವಾಲಯಗಳಿಗೆ ಪ್ರವೇಶವನ್ನು ಮಾಡಿದರು ಹಾಗೂ ಹುಕ್ಕೇರಿಯಲ್ಲಿ ಒಂದು ಬಾವಿಯನ್ನು ಸಹ ಹರಿಜನರಿಗಾಗಿ ಉದ್ಘಾಟಿಸಿದರು. ನಂತರ ಮಾರ್ಚ್ 6ನೇ ತಾರೀಕು ಗಾಂಧೀಜಿಯವರು ಬೆಳಗಾವಿಯಲ್ಲಿದ್ದು ಬೆಳಗಾವಿಯ ಹರಿಜನ ಕೇರಿಗಳಿಗೆ ಭೇಟಿ ನೀಡಿ ಅಲ್ಲಿ ಹರಿಜನರಿಗೆ ಸ್ವಚ್ಛತೆಯನ್ನ ಕಾಪಾಡಿಕೊಳ್ಳಬೇಕು, ಶಿಕ್ಷಣವನ್ನ ಮಕ್ಕಳಿಗೆ ಕೊಡಿಸಬೇಕು ಎಂದು ಮಾತನಾಡಿದರು. ಗಾಂಧೀಜಿಯವರು ಅಸ್ಪೃಶ್ಯತಾ ನಿವಾರಣೆಯ ಪ್ರಚಾರಕ್ಕಾಗಿ ಮತ್ತು ಅದಕ್ಕಾಗಿ ನಿಧಿ ಸಂಗ್ರಹಿಸಲು "ಬೈಲಹೊಂಗಲದಲ್ಲಿ ಕಲ್ಲುಗುಡಿಯ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಹರಿಜನ ಬಾಲಿಕೆಯನ್ನು ಪ್ರವೇಶ ಮಾಡಿಸಿದ್ದರು. ಆಗಿನ ಕಾಂಗ್ರೆಸ್ ಮುಖಂಡರಾದ ಶಿಖರಪ್ಪನವರು ಮೆಟಗುಡ್ಡ, ಅಣ್ಣಪ್ಪನವರು ಮೆಟಗುಡ್ಡ, ಭುಜಂಗಪ್ಪ ಬೊಂಗಾಳೆ, ವೀರಪ್ಪ ರೇಶ್ಮಿ ಮೊದಲಾದವರು ಗಾಂಧೀಜಿಯವರಿಗೆ ಸ್ವಾಗತ ನೀಡಿ ಊರ ಹೊರಗಿನ ನಗರಸಭೆಯ ಭವ್ಯ ಮಂಟಪದಲ್ಲಿ ನಡೆದ ಸಭೆಯಲ್ಲಿ ಅವರು ಭಾಷಣ ಮಾಡಿದರು[4]. 5–3–1934 ರಲ್ಲಿ ಗಾಂಧೀಜಿಯವರು ಸವದತ್ತಿ ತಾಲೂಕಿನ ಹೊಸೂರು ಗ್ರಾಮಕ್ಕೆ ಭೇಟಿಯನ್ನು ನೀಡಿದಾಗ ಹರಿಜನ ನಿಧಿಗೆ ಪದ್ಮರಾಜ ಭೋಗಾರ ತನ್ನ ಬಂಗಾರದ ಉಂಗುರ, ವೀರಪ್ಪ ಸುತಗಟ್ಟಿ ಕಿವಿಯ ಬಂಗಾರದ ಚೌಕಳಿ ನೀಡಿದರು.

ನಂತರ ಗಾಂಧಿಜಿಯವರು ನಿಪ್ಪಣಿಗೆ ಭೇಟಿ ನೀಡಿದರು. ನಿಪ್ಪಣಿಯ ವರ್ತಕ ಮಂಡಳಿಯವರು ಗಾಂಧಿಜಿಯವರನ್ನು ಆಹ್ವಾನಿಸಿ ನಿಧಿಯನ್ನು

[3] ಸಿದ್ದವ್ವನ ಹಳ್ಳಿ ಕೃಷ್ಣಶರ್ಮ. (1970). *ಗಾಂಧೀ ಮತ್ತು ಕರ್ನಾಟಕ. ಗಾಂಧೀ ಸ್ಮಾರಕ ನಿಧಿ.* ಪುಟ, ಸಂ.56 – 73

[4] ಚವಲಾರ ಸರೋಜಿನಿ. (1988). *ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು.* ಪುಟ–XVI

ಅರ್ಪಿಸಿದರು. ಅಕ್ಷಯಚಂದ್ರ ಇವರು ಹರಿಜನರ ಸೇವಕ ಮಕ್ಕಳನ್ನು ತಮ್ಮ ಮನೆಯಲ್ಲಿ ಬೆಳೆಸುತ್ತಿದ್ದಾರೆ. ಹಾಗಾಗಿ ಇವರ ಕೆಲಸಕ್ಕೆ ಸಹಾಯಕವಾಗಿ ನಿಲ್ಲಬೇಕು, ಅವರಿಗೆ ಧನ ಸಹಾಯವನ್ನು ಮಾಡಬೇಕೆಂದು ಗಾಂಧೀಜಿಯವರು ನಿಪ್ಪಣಿಯ ಜನರಲ್ಲಿ ಕೇಳಿಕೊಂಡರು. ನಂತರ ಗಾಂಧೀಜಿಯವರು ಅಥಣಿಗೆ ಭೇಟಿ ನೀಡಿದರು. ಹರಿಜನರ ಏಳಿಗೆಗೆ ಎಲ್ಲರೂ ಸಹಕರಿಸಬೇಕೆಂದು ತಿಳಿಸಿದರು.

**ಹುದಲಿ ಗಾಂಧಿ ಸೇವಾ ಸಂಘದ ಸಮ್ಮೇಳನ ಮತ್ತು ಗಾಂಧಿ:**

ಗಾಂಧೀಜಿಯವರ ಪ್ರಭಾವದಿಂದ ಬೆಳಗಾವಿ ಜಿಲ್ಲೆಯ ಹುದಲಿ ಗ್ರಾಮದಲ್ಲಿ ಖಾದಿ ಗ್ರಾಮೋದ್ಯೋಗ ಕೇಂದ್ರ ಪ್ರಾರಂಭವಾಗಿತ್ತು. ಇಲ್ಲಿಯೇ ಹತ್ತಿರದಲ್ಲಿ ಕುಮರಿ ಆಶ್ರಮವನ್ನು ಸಹ ಪ್ರಾರಂಭಿಸಲಾಗಿತ್ತು. ಈ ಗ್ರಾಮದಲ್ಲಿ ಶ್ರೀರಾಮಚಂದ್ರ ವಡವಿ, ಶ್ರೀಪುಂಡಲೀತಜಿ ಕಾತಗಡ ಇವರು ಖಾದಿ ಕಾರ್ಯದಲ್ಲಿ ತೊಡಗಿದ್ದರು. ಇಲ್ಲಿ ಗಾಂಧಿ ಸೇವಾ ಸಂಘದ ವಾರ್ಷಿಕ ಸಮ್ಮೇಳನವನ್ನು ಐದು ದಿನಗಳ ಕಾಲ ಆಯೋಜಿಸಲು ಸ್ಥಳೀಯ ನಾಯಕರು ತೀರ್ಮಾನಿಸಿದರು. ಈ ಸಮ್ಮೇಳನಕ್ಕೆ ಬೇಕಾದ ಎಲ್ಲಾ ಸಿದ್ದತೆಗಳನ್ನು ಮಾಡಿದರು. ದಿನಾಂಕ: 16–04–1937 ರಂದು ಬೆಳಿಗ್ಗೆ ಗಾಂಧೀಜಿಯವರು ಶಿಬಿರವನ್ನು ತಲುಪಿದರು. ಮದ್ಯಾಹ್ನ 3.30ಕ್ಕೆ ಕಾರ್ಯಕ್ರಮ ಪ್ರಾರಂಭವಾಯಿತು. ಗಂಗಾಧರರಾವ್ ದೇಶಪಾಂಡೆಯ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು. ಗಾಂಧೀ ಸೇವಕ ಸಂಘದ ಕರ್ನಾಟಕ ಶಾಖೆ 1925ರಲ್ಲಿ ಪ್ರಾರಂಭವಾಗಿ, ಈ ಶಾಖೆಯಲ್ಲಿ 10 ಮಂದಿ ಸದಸ್ಯರು, ಮೂವರು ಸಹ ಸದಸ್ಯರು, ಹನುಮಂತರಾವ್ ಕೌಜಲಗಿ, ಬಳ್ಳಾರಿಯಲ್ಲಿ ಟೇಕೂರು ಸುಬ್ರಮಣ್ಯಂ, ಬೆಳಗಾವಿಯ ಬೆಳಗುಂದಿಯಲ್ಲಿ ಕಾಕಾಸಾಹೇಬ್ ಕಾಲೇಶ್ವರ, ಹಳ್ಳಿಕೇರೆ ಇವರುಗಳ ಸೇವೆಯನ್ನು ಸ್ಮರಿಸಿದರು.

ನಂತರ ಗಾಂಧೀಜಿಯವರು ಗಾಂಧಿ ಸೇವಾ ಸಂಘವು ಕಾಂಗ್ರೆಸ್‌ನ ಒಂದು ಭಾಗ. ಇದು ಕಾಂಗ್ರೆಸ್ ವಿರೋಧಿ ಅಲ್ಲ. ಅದರ ಸೇವೆಗೋಸ್ಕರವಿದೆ. ಸಂಘವು ರಚನಾತ್ಮಕ ಕಾರ್ಯಕ್ರಮಗಳಿಗಾಗಿ ಜನ್ಮತಾಳಿದೆ. ಕಾಂಗ್ರೆಸ್ ಕೋಟಿ–ಕೋಟಿ ಜನಗಳ ಪ್ರತಿನಿಧಿ, ಈ ಪ್ರತಿನಿಧಿಗಳು ಸತ್ಯ ಮತ್ತು ಅಹಿಂಸೆಗಳನ್ನು ಪಾಲಿಸುತ್ತಾರೆ. ನಾನು ಇವುಗಳನ್ನು ಪಾಲಿಸುತ್ತೇನೆ. ಎಲ್ಲರೂ ನಿಷ್ಠೆಯಿಂದ ದೇಶಸೇವೆ ಮಾಡಬೇಕೆಂದು ತಮ್ಮ ಭಾಷಣದಲ್ಲಿ ಮಾತನಾಡಿದರು.[5] ಈ ಸಭೆಯಲ್ಲಿ ರಾಷ್ಟ್ರಮಟ್ಟದ ಗಾಂಧಿ ಸೇವಕ ಸಂಘದಅಧ್ಯಕ್ಷರಾದ ಕೀಶೊರಲಾಲ್ ಬಾಯ್, ಅಬ್ದುಲ್ ಗಾಫರ್ ಖಾನ್, ಜಮನಾಲಾಲ್, ಬಾಬು ರಾಜೇಂದ್ರ ಪ್ರಸಾದ್, ಸರ್ದಾರ್ ವಲ್ಲಬಾಯಿ ಪಟೇಲ್ ಸಹ ಭಾಗವಹಿಸಿದ್ದರು. ಸ್ವಾಗತ ಸಮಿತಿಯ ಅಧ್ಯಕ್ಷರಾದ ಗಂಗಾಧರರಾವ್ ದೇಶಪಾಂಡೆಯವರು ಗಾಂಧೀ ಸೇವಕ ಸಂಘ ಅಧಿವೇಶನಕ್ಕೆ ಶ್ರಮಿಸಿದ ಎಲ್ಲರನ್ನು ಸ್ಮರಿಸುತ್ತ ಎಲ್ಲರನ್ನು ಸ್ವಾಗತಿಸಿದರು. ದಿನಾಂಕ16/04/1937 ರಿಂದ 20/04/1937 ರವರೆಗೆ ನಡೆಯಿತು.

**ಉಪಸಂಹಾರ**

ಗಾಂಧೀಜಿಯವರ ಬೆಳಗಾವಿಯ ಈ ಭೇಟಿಯಿಂದ ಈ ಭಾಗದ ಜನರ ಮೇಲೆ ಸಾಕಷ್ಟು ಪ್ರಭಾವಿಸಿದರು. ಸ್ವಾತಂತ್ರ್ಯ ಹೋರಾಟದ ಎಲ್ಲಾ ಮಜಲುಗಳು ಸಕ್ರಿಯವಾಗಿ ಪಾಲ್ಗೊಂಡರು, ಸ್ವಾತಂತ್ರ್ಯ ಪ್ರಾಪ್ತಿಯಾಗುವವರಿಗೂ ಸಮರ್ಪಣಾ ಭಾವದಿಂದ ಮುನ್ನಡೆದರು.

**ಪರಾಮರ್ಶನ ಗ್ರಂಥಗಳು**


- ಆರ್ಯ ಮಿಂಚ್ ಮಲ್ಲಿಕಾರ್ಜುನ. (2011). *ಬ್ರಿಟಿಷರ ಆಡಳಿತ ಮತ್ತು ರಾಣಿ ಕಿತ್ತೂರು ಚೆನ್ನಮ್ಮ*. ಕನ್ನಡ ಸಾಹಿತ್ಯ ಪರಿಷತ್ತು.
- ಬುರ್ಲಿ ಬಿಂದು ಮಾಧವ. (1939). *ಭಾರತೀಯ ಸ್ವಾತಂತ್ರ್ಯದ ಹೆಜ್ಜೆಗಳು.*


[5] ಸಿದ್ದವ್ವನ ಹಳ್ಳಿ ಕೃಷ್ಣಶರ್ಮ. (1970). *ಪೂರ್ವೋಕ್ತ*, ಪುಟ. 56–73

- ದೇಶಪಾಂಡೆ, ಬಾ.ಯಾ. (1973). *ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಸಮರ, ಸಂಪುಟ–1.* ಬೆಳಗಾವಿ ಜಿಲ್ಲಾ ಖಾದಿ ಗ್ರಾಮೋದ್ಯೋಗ ಸಂಘ.
- ಜಕಾತಿ. ಬ.ರೂ. (1972). *ಕಿತ್ತೂರು ನಾಡಿನಲ್ಲಿ ಸ್ವಾತಂತ್ರ್ಯ ಸಂಗ್ರಾಮ.*
- ಕುಲಕರ್ಣಿಆರ್, ಎಚ್. (1992). *ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಚಳುವಳಿ.* ವೆಂಕಟೇಶ್ವರ ಪ್ರಕಾಶನ.
- ನಾಗರತ್ನಮ್ಮ, ಎಸ್. (2009). *ಕರ್ನಾಟಕದಲ್ಲಿ ಅಸಹಕಾರ ಮತ್ತು ನಾಗರಿಕ ಕಾನೂನು ಭಂಗ ಚಳುವಳಿ.* ದೇಶಿ ಪುಸ್ತಕ ಪ್ರಕಾಶನ.
- ಸಿದ್ದವ್ವನ ಹಳ್ಳಿ ಕೃಷ್ಣಶರ್ಮ. (1968). *ಗಾಂಧೀ ಮತ್ತು ಕರ್ನಾಟಕ.* ಗಾಂಧೀ ಸ್ಮಾರಕ ನಿಧಿ.
- ಸೂರ್ಯನಾಥ್ ಕಾಮತ್ ಮತ್ತು ದಾನಿ ಸುರೇಂದ್ರ. (1988). *ಸ್ವಾತಂತ್ರ್ಯ ಹೋರಾಟದ ಹಲವು ಮುಖಗಳು.*
- ಸೂರ್ಯನಾಥ್ ಕಾಮತ್. (1974). *ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು. ಸಂಪುಟ–1.*